ಅಣುಶಕ್ತಿ ಕೇಂದ್ರೀಯ ವಿದ್ಯಾಲಯ, ಮೈಸೂರು
ಅಭ್ಯಾಸ ಪತ್ರಿಕೆ - ಏಪ್ರಿಲ್-೨೦೨೫
7ನೇ ತರಗತಿ - ಕನ್ನಡ

ಅ. ಕೆಳಗಿನ ಚಿತ್ರವನ್ನು ನೋಡಿ ಚಿತ್ರಕ್ಕೆ ಸಂಬಂಧಿಸಿದಂತೆ ಐದು ವಾಕ್ಯಗಳನ್ನು ಬರೆಯಿರಿ.



ಆ. ಕೆಳಗೆ ನೀಡಿರುವ ಚಿತ್ರಗಳನ್ನು ಗಮನಿಸಿ ಕಥೆ ಬರೆಯಿರಿ.



ಇ. ಕೆ ಎಸ್ ನಿಸಾರ್ ಅಹಮದ್ ರವರು ಬರೆದಿರುವ ಯಾವುದಾದರೂ ಒಂದು ಕವಿತೆಯನ್ನು ಬರೆಯಿರಿ.

ಈ. ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ.
೧. ವತ್ಸರ   ೨.  ನಿತ್ಯೋತ್ಸವ ೩. ಉತ್ತುಂಗ ೪. ಸದ್ವಿಕಾಸ

ಉ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.
೧.ಜೋಗದ ಸಿರಿ ಯಾವುದು?
೨.ಹರಿದ್ವರ್ಣ ಕಾಡುಗಳಲ್ಲಿ ಯಾವ ವಿಧದ ಮರಗಳಿವೆ?

ಊ. ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.
೧. ನಿತ್ಯೋತ್ಸವ.     ೨. ಇತಿಹಾಸ

ಋ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.
೧. ಲೋಹದದಿರ.    ೨. ಲೋಕಾಮೃತ

# ಅಣುಶಕ್ತಿ ಕೇಂದ್ರೀಯ ವಿದ್ಯಾಲಯ,ಮೈಸೂರು

ಅಭ್ಯಾಸ ಪತ್ರಿಕೆ-೧ ಏಪ್ರಿಲ್ **-೨೦೨೫**

**ವಿಷಯ : ಕನ್ನಡ(ದ್ವಿತೀಯ ಭಾಷೆ)**

**ತರಗತಿ : ೭ ದಿನಾಂಕ:**

**I. ಕೆಳಗಿನ ಗದ್ಯಭಾಗವನ್ನು ಓದಿ ಅರ್ಥೈಸಿಕೊಂಡು, ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ. ೫**

ಹಿಡಂಬ ವನದಿಂದ ಹೊರಟ ಪಾಂಡವರು ಬೇರೆ ಬೇರೆ ದೇಶಗಳನ್ನು ತಿರುಗಾಡಿ ಏಕಚಕ್ರಪುರಕ್ಕೆ ಬಂದರು.ಆ ಸಂದರ್ಭದಲ್ಲಿ ಒಬ್ಬ ಕುಂಬಾರನ ಮನೆಗೆ ಬೆಂಕಿ ಹೊತ್ತಿಕೊಂಡಿತ್ತು.ಪಾಂಡವರು ಬೆಂಕಿಯನ್ನಾರಿಸಲು ಸಹಾಯ ಮಾಡಿದರು. ಅದರಿಂದಾಗಿ ಕುಂಬಾರನು ಅವರಿಗೆ ಐದು ಪಾತ್ರೆಗಳನ್ನು ಕೊಟ್ಟನು.ಐವರು ಪಾಂಡವರು ಬೇರೆ ಬೇರೆ ಮನೆಗಳಿಂದ ಭಿಕ್ಷೆಯನ್ನು ಪಡೆದು ತಂದು ತಾಯಿ 'ಕುಂತಿಗೆ' ಒಪ್ಪಿಸುತ್ತಿದ್ದರು.ಎಲ್ಲರೂ ಸೇರಿ ತಂದ ಆಹಾರದಲ್ಲಿ ಅರ್ಧ ಪಾಲು ಆಹಾರವನ್ನು ಭೀಮನಿಗೆ ಕೊಡುತ್ತಿದ್ದರು.ಮತ್ತು ಉಳಿದ ಅರ್ಧಭಾಗ ಆಹಾರದಲ್ಲಿ ಎಲ್ಲರೂ ಹಂಚಿಕೊಂಡು ತಿನ್ನುತ್ತಿದ್ದರು. ಆದರೂ ಸಹ ವಿಪರೀತ ಹಸಿವಿನ ಭೀಮನಿಗೆ ಇವರು ನೀಡಿದ ಆಹಾರ ಪೂರ್ಣವಾಗಿ ಹೊಟ್ಟೆ ತುಂಬುತ್ತಿರಲಿಲ್ಲ.

ಪ್ರಶ್ನೆಗಳು :

೧. ಪಾಂಡವರು ಬೇರೆ ಬೇರೆ ಮನೆಗಳಿಂದ________ ಪಡೆದು ತಂದರು.

೨. ಬೆಂಕಿಯನ್ನು ಹಾರಿಸಲು ಸಹಾಯ ಮಾಡಿದ ಪಾಂಡವರಿಗೆ ಕುಂಬಾರನು ಏನು ಕೊಟ್ಟನು?

________________________________

೩. ಪಾಂಡವರು ಎಲ್ಲಿಂದ ಹೊರಟರು?

________________________________

೪. ಯಾರ ಮನೆಗೆ ಬೆಂಕಿ ಹೊತ್ತಿಕೊಂಡಿತ್ತು?

________________________________

೫. ತಾಯಿಯು ತನ್ನ ಆಹಾರದಲ್ಲಿ ಯಾರಿಗೆ ಅರ್ಧ ಪಾಲು ಕೊಡುತ್ತಿದ್ದಳು?

________________________________

**II. ಕೆಳಗಿನ ಪದ್ಯವನ್ನು ಓದಿ ಅರ್ಥೈಸಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.೫**

**ಅ)** ರವಿಕಿರಣಗಳ ಸೆರೆಯೊಳಡಗಿಸಿಹ ಕಾರಿರುಳೆ

ಹೊರಗೆ ಬಿಡು, ದೂರ ಸರಿ ಹರಡಲೀ ಬೆಳಕು;

ತೊಳೆದು ಹೋಗಲಿ ಸಕಲ ಮೈ ಮನದ ಕೊಳಕುಗಳು
ಒಳ ಹೊರಗು ತಿಳಿನೀರ ಮಳೆ ಸುರಿಯಬೇಕು

ಪ್ರಾಣ ಪಣಕಿಟ್ಟಿಹೆವು - ಸಿಡಿಲ ಮರಿಗಳು ನಾವು ಪ್ರಳಯ ರುದ್ರರೆ ಹೌದು - ಭಾರತಿಯ ಆಣೆ.
ಇನ್ನು ನಿನಗುಳಿಗಾಲವಿಲ್ಲ - ನೀ ತೊಲಗು ಇನ್ನೆಲ್ಲ ನೀನೇಳು ಕಡಲುಗಳ ರಾಣಿ.
**ಪ್ರಶ್ನೆಗಳು:**

೧. "ಕಾರಿರಳು"ಈ ಪದವು_____ಸಮಾಸಕ್ಕೆ ಉದಾಹರಣೆಯಾಗಿದೆ.
೨. ತೊಳೆದು ಹೋಗಲಿ ಸಕಲ______ಕೊಳಕುಗಳು.
೩. ತಿಳಿ ನೀರ ಮಳೆ ಎಲ್ಲಿ ಸುರಿಯಬೇಕು?
೪. ಕವಿ ಈ ಪದ್ಯದಲ್ಲಿ ಯಾರಿಗೆ ಇನ್ನು ಉಳಿಗಾಲವಿಲ್ಲ ಎಂದು ಹೇಳುತ್ತಿದ್ದಾರೆ?
೫. 'ನೀನೇಳು'ಈ ಪದವು_____ಸಂದಿಗೆ ಉದಾಹರಣೆಯಾಗಿದೆ.

**III. ಪದಗಳ ಅರ್ಥ ಬರೆಯಿರಿ.೩**

ಅ ) ಹಾಡ್ಗತೆ ____________
ಆ ) ಪ್ರಾಣಿಗಿಂಡಿ ____________
ಇ) ಸಾಂತ್ವಾನ ____________

**IV. ಕೆಳಗಿನ ಪದಗಳ ವಚನ ಬದಲಿಸಿ ಬರೆಯಿರಿ.೩**

ಅ ) ನಾನು ________
ಆ ) ನಾಮ ________
ಇ ) ಶಾಲೆ________

**V. ಕೆಳಗಿನ ಪದಗಳಿಗೆ ಸ್ವಂತ ವಾಕ್ಯ ರಚಿಸಿ.೩**

ಅ ) ನದಿಗಳು ಆ ) ಅರಣ್ಯ
ಇ ) ಕಥೆ

**VI. ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ.೩**

**೧**. ಅಂಕಿತನಾಮಕ್ಕೆ ಒಂದು ಉದಾಹರಣೆ ಕೊಡಿ.

೨. ರೂಢನಾಮಕ್ಕೆ ಒಂದು ಉದಾಹರಣೆ ಕೊಡಿ.

೩. ಅನ್ವರ್ಥನಾಮಕ್ಕೆ ಒಂದು ಉದಾಹರಣೆ ಕೊಡಿ.

**VII. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ೪**

೧. ಜಿಂಕೆಯ ಕುತ್ತಿಗೆಯಲ್ಲಿ ಏನಿತ್ತು?

೨. ಹುಲಿ ಸೋತು ಏನು ಮಾಡಿತು?

೩.ಪುಟ್ಟಜ್ಜಿಯ ಬಳಿ ಹುಡುಗ ಯಾವ ಕಥೆ ಹೇಳಬೇಕೆಂದು ಕೇಳಿದನು?

೪. ಹಳ್ಳದ ದಂಡೆಯ ಮೇಲಿನ ಊರು ಏನಾಯಿತು ?

**VIII .ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ.೪**

೧. ಹಳ್ಳ ಹರಿದು ಊರ ಜನರನ್ನು ಏನು ಮಾಡಿದೆ?

೨.ಯುವಕ ಚುಕ್ಕಿಯ ಬಗೆಗೆ ಇವತ್ತಿಗೆ ಏನು ಹೇಳಿದನು?

**IX. 'ನೀವು ಪರಿಸರವನ್ನು ಹೇಗೆ ಸಂರಕ್ಷಿಸುವಿರಿ' ಕುರಿತು ಐದಾರು ವಾಕ್ಯದಲ್ಲಿ ಬರೆಯಿರಿ.೩**

**X. ಸಂದರ್ಭ ಸಹಿತ ವಿವರಿಸಿ.೩**

೧. "ಇದು ನಾವು ಸಾಕಿಕೊಂಡ ಜಿಂಕೆ"